ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಸಂಖ್ಯೆ :ಸಿಆಸುಇ:102:ಆರ್‌ಟಿಐ:2012

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ: 22.09.2014.

ಇಂದ :
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಆಸುಇ (ಜನಸ್ಪಂದನ),
ವಿ.ವಿ.ಗೋಪುರ,
**ಬೆಂಗಳೂರು.**

RECEIVED
OCT 2014
CM 17949
KSPCB, Bangalore

ಇವರಿಗೆ :

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
3. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳು.

ಮಾನ್ಯರೆ,

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಸಮಗ್ರ ಅನುಷ್ಠಾನಕ್ಕಾಗಿ ನಡೆದ ಉನ್ನತ ಮಟ್ಟದ ಸಮಿತಿಯ ಐದನೇ ಸಭೆಯ ನಡವಳಿಗಳು

---0---

ಮಾಹಿತಿ ಹಕ್ಕು ಅಧಿನಿಯಮ, 2005ರ ಸಮಗ್ರ ಅನುಷ್ಠಾನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಪುನರ್‌ರಚಿತವಾಗಿರುವ ಉನ್ನತ ಮಟ್ಟದ ಸಮಿತಿಯ ಐದನೇ ಸಭೆಯು ದಿನಾಂಕ: 06.09.2014ರಂದು ನಡೆದಿದ್ದು,ಸದರಿ ಸಭೆಯ ನಡವಳಿಗಳ ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಡನೆ ಲಗತ್ತಿಸಿ ಕಳುಹಿಸಲಾಗಿದೆ.

ಕೈಗೊಂಡ ಕ್ರಮದ ಬಗ್ಗೆ ಅನುಸರಣಾ ವರದಿಯನ್ನು ಸಿಆಸುಇ (ಜನಸ್ಪಂದನ ಕೋಶ)ಗೆ ಕಳುಹಿಸಿಕೊಡಬೇಕಾಗಿ ತಮ್ಮನ್ನು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,
22/9/14
(ಹೆಚ್.ಬಿ. ಪ್ರಮುಲ್ಲವತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಜನಸ್ಪಂದನ)

CM
CM/4 13/10/14
CEO-1
10/10/14

**ಪ್ರತಿ : – ಮಾಹಿತಿಗಾಗಿ**

1) ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ), ಬೆಂಗಳೂರು.
5) ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ), ಬೆಂಗಳೂರು.

EO
AAO

\\10.98.144.102\Office work\RIGHT TO INFORMATION ACT 2005 ALL\Right to Information Act-2014\RTI-U.O.Note.doc

**ದಿನಾಂಕ: 06.09.2014ರಂದು ಬೆಳಿಗ್ಗೆ 11.30ಗಂಟೆಗೆ ಸಮಿತಿ ಕೊಠಡಿ ಸಂಖ್ಯೆ: 222 2ನೇ ಮಹಡಿ, ವಿಕಾಸಸೌಧ ಇಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005ರ ಸಮಗ್ರ ಅನುಷ್ಠಾನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಮಿತಿಯ ಐದನೇ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರು

ಅನುಬಂಧದಲ್ಲಿ ಪಟ್ಟಿ ಲಗತ್ತಿಸಿದೆ.

ಮೊದಲಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ(ಜನಸ್ಪಂದನ) ಇವರು ಸಭಾಧ್ಯಕ್ಷರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಇತರ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ಸಭಾಧ್ಯಕ್ಷರಾದ ಅಪರ ಮುಖ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಉನ್ನತ ಮಟ್ಟದ ನಾಲ್ಕನೇ ಸಭೆ ನಡೆದು ಸುಮಾರು 2 ವರ್ಷಗಳಾಗಿದ್ದು, ಕಾರಣಾಂತರಗಳಿಂದ ವಿಳಂಬವಾಗಿದೆಯೆಂದು ತಿಳಿಸುತ್ತಾ, ಮೊದಲಿಗೆ ದಿನಾಂಕ: 19.05.2012ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಉನ್ನತ ಮಟ್ಟದ ಸಮಿತಿಯ 4ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲಿನ ಅನುಸರಣಾ ವರದಿಯನ್ನು ಕೈಗೆತ್ತಿಕೊಂಡರು.

**1. ಕರ್ನಾಟಕ ಮಾಹಿತಿ ಆಯೋಗದ ಸ್ವಂತ ಕಟ್ಟಡ:**

ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ ಇವರು ಕರ್ನಾಟಕ ಮಾಹಿತಿ ಆಯೋಗದ ಸ್ವಂತ ಕಟ್ಟಡದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸ್ತುತ ಮೂರು ಅಂತಸ್ತುಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ನಾಲ್ಕನೇ ಅಂತಸ್ತಿನ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಕಟ್ಟಡದ ಕಾಮಗಾರಿ ಯಾವಾಗ ಮುಗಿಯಬಹುದು ಎಂದು ಸಭಾಧ್ಯಕ್ಷರು ಕೇಳಿದಾಗ ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ ಇವರು ಕಾಮಗಾರಿಯು ಮಾರ್ಚ್ 2015ರೊಳಗಾಗಿ ಪೂರ್ಣಗೊಳ್ಳಬಹುದೆಂದು ತಿಳಿಸಿದರು. ಮುಂದಿನ ಸಭೆಗೆ ಈ ಬಗ್ಗೆ ಚರ್ಚಿಸಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಆಹ್ವಾನಿಸುವಂತೆ ಮತ್ತು ಕಟ್ಟಡದ ನಿರ್ಮಾಣ ಕಾಮಗಾರಿಯ ಪ್ರಗತಿಯ ವರದಿಯನ್ನು ಸಿಆಸುಇ(ಜನಸ್ಪಂದನ)ಗೆ ಒದಗಿಸುವಂತೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಕರ್ನಾಟಕ ಮಾಹಿತಿ ಆಯೋಗ)**

**2. ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ಮಾಹಿತಿ ಹಕ್ಕು ಅರ್ಜಿಗಳ ನಿರ್ವಹಣೆಯ ಬಗ್ಗೆ ಷರಾ ನಮೂದಿಸಲು ಸೂಕ್ತ ಕಾಲಂ ಅನ್ನು ಅಳವಡಿಸುವ ಬಗ್ಗೆ:**

ಮಾಹಿತಿ ಹಕ್ಕು ಅಧಿನಿಯಮ, 2005ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಕರ್ತವ್ಯ ಲೋಪವೆಸಗಿದರೆ ಅವರಿಗೆ ದಂಡವನ್ನು ವಿಧಿಸಲು ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್